ಹುಬ್ಬಳ್ಳಿ ಧಾರವಾಡ ಸ್ಮಾರ್ಟಸಿಟಿ ಲಿಮಿಟೆಡ್
HUBBALLI DHARWAD SMART CITY LIMITED
Special Purpose Vehicle for Implimentation of Smart City Project
(Registered Company No. CIN : U74999KA2017 PLC 101265)

ನಂ. ಹುಧಾಸ್ಮಾಸಿ/ಮಗಾಮಾಸಮೀಕ್ಷೆ/2019–20 ದಿನಾಂಕ : 08–08–2019

# ಸಾರ್ವಜನಿಕ ಪ್ರಕಟಣೆ

## ಮಹಾತ್ಮಾಗಾಂಧೀ ಮಾರುಕಟ್ಟೆ ದುರ್ಗದ ಬೈಲ್, ಹುಬ್ಬಳ್ಳಿ ಉದ್ದೇಶಿತ ಕಟ್ಟಡದಲ್ಲಿ 4ನೇ ಮಹಡಿಯಲ್ಲಿ ಲಭ್ಯವಾಗುವ ಒಟ್ಟು 8 ಅಂಗಡಿಗಳ ವಿಸ್ತೀರ್ಣ 3966 ಚ.ಮೀ, ಹಾಗೂ 5ನೇ ಮಹಡಿಯಲ್ಲಿ ಒಟ್ಟು 08 ಅಂಗಡಿಗಳ ವಿಸ್ತೀರ್ಣ 3966 ಚ.ಮೀ ಸುಸಜ್ಜಿತ ಲಭ್ಯವಾಗುವ ಜಾಗೆಯಲ್ಲಿ ವ್ಯಾಪಾರ, ಶೈಕ್ಷಣಿಕ ಚಟುವಟಿಕೆ ಹಾಗೂ ಖಾಸಗಿ ಸಂಸ್ಥೆಗಳ ಕಚೇರಿಯನ್ನು ಸ್ಥಾಪಿಸಲು ಭಾಡಿಗೆ ಆಧಾರದ ಮೇಲೆ ಪಡೆಯಲು ಅರ್ಹ ಅರ್ಜಿದಾರರಿಂದ ನೊಂದಾಯಿಸಲು ಬೇಡಿಕೆ ಸಮೀಕ್ಷೆಯಲ್ಲಿ ಅರ್ಜಿ ಆಹ್ವಾನಿಸಿದ ಕುರಿತು

ಜಾಹೀರಾತು ಸಂಖ್ಯೆ : 12/2019–20 ದಿನಾಂಕ : 09–08–2019

ಹುಬ್ಬಳ್ಳಿ–ಧಾರವಾಡ ಸ್ಮಾರ್ಟಸಿಟಿ ಯೋಜನೆಯಲ್ಲಿ ಮಹಾತ್ಮಾಗಾಂಧಿ ಮಾರುಕಟ್ಟೆಯ ಕಟ್ಟಡದ ಪ್ರದೇಶದಲ್ಲಿ ನೂತನ ವಿನ್ಯಾಸದೊಂದಿಗೆ ಮಾರುಕಟ್ಟೆಯನ್ನು ಅಭಿವೃದ್ದಿಪಡಿಸಲಾಗುತ್ತಿದೆ. ಸದರಿ ಪ್ರದೇಶದಲ್ಲಿ ಉತ್ತಮ ಗುಣಮಟ್ಟದ ಸುಸಜ್ಜಿತ ತರಕಾರಿ ಮಾರುಕಟ್ಟೆ ಹಾಗೂ ಉತ್ತಮ ಸ್ಥಳಾವಕಾಶ ಇರುವ ಕಟ್ಟಡವನ್ನು ಮರು ವಿನ್ಯಾಸದೊಂದಿಗೆ ವ್ಯವಸ್ಥಿತವಾಗಿ ಕೆಳಮಹಡಿಯಲ್ಲಿ ವಾಹನ ನಿಲುಗಡೆ. ನೆಲ ಮಹಡಿಯಲ್ಲಿ ತರಕಾರಿ ಮಾರುಕಟ್ಟೆ, ಮೊದಲನೇ ಮಹಡಿ, 2ನೇ ಮಹಡಿ ಹಾಗೂ 3ನೇ ಮಹಡಿಯಲ್ಲಿ ವ್ಯಾಪಾರದ ಮಳಿಗೆ ಹಾಗೂ ನಾಲ್ಕು ಮತ್ತು ಐದನೇ ಮಹಡಿಯಲ್ಲಿ ಉತ್ತಮ ಸುಸಜ್ಜಿತ ವಿಶಾಲವಾದ ಸ್ಥಳಾವಕಾಶ ಲಭ್ಯವಾಗುವ ಜಾಗೆಯಲ್ಲಿ ಉತ್ತಮ ನೂತನ ವಿನ್ಯಾಸದ ಕಟ್ಟಡವನ್ನು ನಿರ್ಮಿಸಲಾಗುತ್ತಿದೆ.

ಪ್ರಸ್ತುತ ನೆಲ ಮಹಡಿಯಲ್ಲಿ ತರಕಾರಿ ಮಾರುಕಟ್ಟೆ, ಮೊದಲನೇ ಮಹಡಿ, 2ನೇ ಮಹಡಿ ಹಾಗೂ 3ನೇ ಮಹಡಿಯಲ್ಲಿ ವ್ಯಾಪಾರದ ಮಳಿಗೆಗೆ ಕಾಯ್ದಿರಿಸಲಾಗಿದೆ. 4ನೇ ಮಹಡಿಯಲ್ಲಿ ಲಭ್ಯವಾಗುವ 3966 ಚ.ಮೀ. ಜಾಗೆಯಲ್ಲಿ ಅಂದಾಜು 08 ಮಳಿಗೆಗಳಲ್ಲಿ 02 ಮಳಿಗೆ 265 ಚ.ಮೀ, 02 ಮಳಿಗೆ 566.07 ಚ.ಮೀ, 02 ಮಳಿಗೆ 516 ಚ.ಮೀ ಹಾಗೂ 02 ಮಳಿಗೆ 250 ಚ.ಮೀ ಲಭ್ಯವಿರುವವು ಮತ್ತು 5ನೇ ಮಹಡಿಯಲ್ಲಿ 3966 ಚ.ಮೀ. ಜಾಗೆಯಲ್ಲಿ (ನಕ್ಷೆಯಲ್ಲಿ ತೋರಿಸಿದಂತೆ) ಅಂದಾಜು 08 ಮಳಿಗೆಗಳಲ್ಲಿ 02 ಮಳಿಗೆ 265 ಚ.ಮೀ, 02 ಮಳಿಗೆ 566.07 ಚ.ಮೀ, 02 ಮಳಿಗೆ 516 ಚ.ಮೀ ಹಾಗೂ 02 ಮಳಿಗೆ 250 ಚ.ಮೀ ಲಭ್ಯವಿರುವುದು. ಉದ್ದೇಶಿತ ಸ್ಥಳದಲ್ಲಿ ಸಾರ್ವಜನಿಕರಿಗೆ ಸೂಕ್ತ ವ್ಯಾಪಾರ, ಶೈಕ್ಷಣಿಕ ಚಟುವಟಿಕೆ, ಕಾರ್ಪೋರೇಟ್ ಸಂಸ್ಥೆ, ಬ್ಯಾಂಕುಗಳಿಗೆ ಮತ್ತು ಇತರ ವ್ಯಾಪಾರ ಕೈಗೊಳ್ಳಲು ಅವಕಾಶವಿರುತ್ತದೆ. ಕಾರಣ ಲಭ್ಯವಾಗುವ ಸ್ಥಳವನ್ನು ಸಾರ್ವಜನಕರ ಬೇಡಿಕೆ ಮತ್ತು ಚಟುವಟಿಕೆಗೆ ಅನುಸಾರ, ಪೌರಾಡಳಿತ ನಿರ್ದೇಶನಾಲಯದ ಮಾರುಕಟ್ಟೆಯ ನಿಯಮಾವಳಿಯಂತೆ ಸ್ಥಳಾವಕಾಶವನ್ನು ಹಂಚಿಕೆ ಮಾಡಿ ಬಾಡಿಗೆಯನ್ನು ಆಕರಿಸಿ ಒದಗಿಸಲಾಗುವುದು.

ಕಾರಣ ಸಾರ್ವಜನಿಕರು ನಿಯೋಜಿತ 4ನೇ ಮಹಡಿ ಮತ್ತು 5ನೇ ಮಹಡಿ ಕಟ್ಟಡದಲ್ಲಿ ಲಭ್ಯವಾಗುವ ಸ್ಥಳಕ್ಕೆ ಬೇಡಿಕೆ ಪತ್ರವನ್ನು ನಿಗದಿತ ನಮೂನೆಯ ಅರ್ಜಿಯೊಂದಿಗೆ ಭರಣಾ ಮಾಡಿ ಆಯುಕ್ತರು ಹುಬ್ಬಳ್ಳಿ–ಧಾರವಾಡ ಮಹಾನಗರ ಪಾಲಿಕೆ, ಇವರ ಹೆಸರಿನಲ್ಲಿ ರೂ. 500/– ಗಳ ಡಿಡಿಯೊಂದಿಗೆ ಅರ್ಜಿಯನ್ನು ದಿನಾಂಕ : **16–08–2019** ರ ಮಧ್ಯಾಹ್ನ 3 ಘಂಟೆಯ ಒಳಗಾಗಿ ವಲಯ ಕಚೇರಿ 09 ಇಂದಿರಾ ಗಾಜಿನ ಮನೆ ಆವರಣ ಇವರಿಗೆ ಸಲ್ಲಿಸಲು ಕೋರಲಾಗಿದೆ. ನಿಗದಿತ ನಮೂನೆಯ ಅರ್ಜಿಯನ್ನು ವಲಯ ಕಚೇರಿ 09 ಅಥವಾ ಹುಬ್ಬಳ್ಳಿ–ಧಾರವಾಡ ಸ್ಮಾರ್ಟಸಿಟಿ ವೆಬ್ ಸೈಟ್ **hubballidharwadsmartcity.com** ಮೂಲಕ ಪಡೆಯಬಹುದಾಗಿದೆ. ತಡವಾಗಿ ಬಂದ ಅರ್ಜಿಗಳನ್ನು ಪರಿಗಣಿಸಲಾಗುವುದಿಲ್ಲ.

ಸಹಿ/– ವ್ಯವಸ್ಥಾಪಕ ನಿರ್ದೇಶಕರು,
ಹುಬ್ಬಳ್ಳಿ–ಧಾರವಾಡ ಸ್ಮಾರ್ಟ್‌ಸಿಟಿ ಲಿಮಿಟೆಡ್ ಹುಬ್ಬಳ್ಳಿ